

ಚಿತ್ರ: ತಾಜುದ್ದೀನ್ ಆಜಾದ್



ಪೋಷಕರು ಪ್ರಶ್ನಿಸಲಿಲ್ಲ. ಉದಾಹರಣೆಗೆ, ಬ್ರಿಟನ್‌ನಲ್ಲಿ, ಆಸ್ಟ್ರೇಲಿಯಾದಲ್ಲಿ ಪ್ರತಿಯೊಂದು ಸರ್ಕಾರಿ ಶಾಲೆಯೂ ಕಡ್ಡಾಯವಾಗಿ ದೇಶದಾದ್ಯಂತ ರಾಷ್ಟ್ರೀಯ ಶಿಕ್ಷಣ ನೀತಿಯನ್ನ, ಪದ್ಧತಿಯನ್ನ, ಪಠ್ಯಕ್ರಮವನ್ನ ಅನುಸರಿಸಲೇಬೇಕು ಎಂಬ ಕೇಂದ್ರೀಯ ಕಾನೂನಿದೆ. ಹೆಚ್ಚಿನ ಮಕ್ಕಳು ಸರ್ಕಾರಿ ಶಾಲೆಗಳಿಗೆ ಹೋಗುತ್ತಾರೆ. ಉಚಿತ ಶಿಕ್ಷಣದ ಜೊತೆಗೆ ಉತ್ತಮ ಶಿಕ್ಷಣವೂ ಸಿಗುತ್ತದೆ. ಇರುವ ಖಾಸಗಿ ಶಾಲೆಗಳು ಅತ್ಯಂತ ದುಬಾರಿ. ಅವನ್ನು ಆರಿಸಿಕೊಳ್ಳುವ ಕುಟುಂಬಗಳಿಗೆ ಅವರದೇ ನಿರ್ದಿಷ್ಟ ಲಕ್ಷ್ಯವಿರುತ್ತದೆ – ಸಾಮಾಜಿಕ ಮೇಲ್ಮಟ್ಟದ ಸಂಪರ್ಕ ಹೊಂದುವ ಗುರಿ ಇರುತ್ತದೆ. ಖಾಸಗಿ ಶಾಲೆಗೆ ಹೋಗುವ ನಿಲುವನ್ನು ಹೆಚ್ಚಿನ ಮಟ್ಟಿಗೆ ಸಾಮಾನ್ಯ ಜನ ಬೆಂಬಲಿಸುವುದಿಲ್ಲ. ಬೆಂಗಳೂರಿನ ಖಾಸಗಿ ಶಾಲೆಯಲ್ಲಿ ನೀಡುವ ಹೆಚ್ಚಿನ ಕಾರ್ಯಕ್ರಮಗಳಾದ ಈಜು, ದೈಹಿಕ ಶಿಕ್ಷಣದ ವಿವಿಧ ಚಟುವಟಿಕೆಗಳು ಪ್ರತಿ ಸರ್ಕಾರಿ ಶಾಲೆಯಲ್ಲೂ ಇವೆ. ಇನ್ನೂ ಹೆಚ್ಚಿನ ವಿವಿಧ ಕಾರ್ಯಕ್ರಮಗಳು ಬೇಕು ಎಂದರೆ ಅದಕ್ಕೆ ತಕ್ಕಂತೆ ಶಾಲೆಯ ಪೇರೆಂಟ್–ಟೀಚರ್ ಅಸೋಸಿಯೇಷನ್ ಹಣ ಮತ್ತು ಸಂಪನ್ಮೂಲಗಳ ಸಂಗ್ರಹ ಮಾಡುತ್ತಾರೆ. ಇಡೀ ಕುಟುಂಬ ಸಕ್ರಿಯವಾಗಿ ಭಾಗವಹಿಸುವುದರಿಂದ ಮಕ್ಕಳಿಗೆ ಶಿಕ್ಷಣದ ಅನುಭವವೂ ಚೆನ್ನಾಗಿರುತ್ತದೆ.

ಖಾಸಗಿ ಶಾಲೆ ತೆರೆಯಲು ಬೇಕಿರುವ ಲೈಸೆನ್ಸ್ ಪಡೆಯುವುದು ಸುಲಭವಲ್ಲ. ಕಾನೂನು, ಕ್ರಮ, ರೀತಿನೀತಿಗಳ ಜೊತೆ ಸರ್ಕಾರ ಮತ್ತು ಪರೀಕ್ಷಣಾ ಸಿಬ್ಬಂದಿ ನಡೆಸುವ ನೂರಾರು ಕಡ್ಡಾಯ ಪರಿಶೀಲನಾ ಕ್ರಮಗಳಲ್ಲಿ ಪಾಸಾಗಿ ಜೈ ಅನ್ನಿಸಿಕೊಳ್ಳಬೇಕು. ಪ್ರತಿಯೊಂದು ಅಂಶವನ್ನೂ ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ಪರಿಶೀಲಿಸುವ ಕ್ರಮಗಳು ಅತ್ಯಂತ ಕಟ್ಟುನಿಟ್ಟು. ಮಕ್ಕಳ ಶಿಕ್ಷಣ, ರಕ್ಷಣೆ, ಕಾಪಾಡುವಿಕೆ ಅಂದರೆ ಆ ದೇಶಗಳಲ್ಲಿ ಅತ್ಯಂತ ಹೆಚ್ಚಿನ ಭದ್ರತೆಯಿದೆ. ಯಾವುದೇ ಕಾರಣಕ್ಕೂ ತಪ್ಪು ಆಗುವಂತಿಲ್ಲ. ಇನ್ನು ಶಿಕ್ಷಣದ ಹೆಸರಲ್ಲಿ ಬೇಕಾಬಿಟ್ಟಿ ವರ್ತಿಸುವುದಂತೂ ಕನಸಿನ ಮಾತು. ಬೆಂಗಳೂರಿನಲ್ಲಿ ಮಕ್ಕಳು, ಪೋಷಕರು ಲಕ್ಷಾಂತರ ರೂಪಾಯಿ ಖರ್ಚು ಮಾಡಿ, ತಮ್ಮ ಜೀವನ ಪದ್ಧತಿಯನ್ನೇ ಬದಲಾಯಿಸಿಕೊಂಡು ಖಾಸಗಿಯಾಗಿ ಶಿಕ್ಷಣವನ್ನು ಪಡೆಯಬೇಕಿದೆ. ಎಂತಹ ವಿಪರ್ಯಾಸ!

‘ಖಾಸಗಿ ಶಾಲೆ ಅನ್ನುವ ಬಳಕೆಯೇ ತಪ್ಪು. ನಮ್ಮ ರಾಜ್ಯದಲ್ಲಿ ಸರ್ಕಾರಿ ಶಾಲೆ ಅಲ್ಲವೆಂದರೆ ಮಿಕ್ಕ ಪ್ರತಿಯೊಂದು ಶಾಲೆಯೂ ಸೊಸೈಟಿ ಅಥವಾ ಟ್ರಸ್ಟ್ ಆ್ಯಕ್ಟ್ ಪ್ರಕಾರ ರಿಜಿಸ್ಟರ್ ಆಗಿರತ್ತೆ. ಖಾಸಗಿ ಅಲ್ಲ, ಸರ್ಕಾರೇತರ ಶಾಲೆಗಳು ಅವು. ಅಂದರೆ ಅವರು ಸಾರ್ವಜನಿಕ ಹಿತಕ್ಕಾಗಿ, ಸೇವೆಗಾಗಿ ಬದ್ಧರಾಗಿರುತ್ತಾರೆ’ ಅನ್ನುತ್ತಾರೆ ನಾಗಸಿಂಹ. ಅವರು ರೈಟ್ ಟು ಎಜುಕೇಷನ್ (ಆರ್‌ಟಿಇ) ಕಾರ್ಯಪಡೆಯ ರಾಜ್ಯ ಸಂಚಾಲಕ.

ಕಡಿಮೆ ಆದಾಯವಿರುವ ಕುಟುಂಬದ ಮಗುವಿನ ಶಿಕ್ಷಣದ ಹಕ್ಕನ್ನ ಕಾಪಿಡಲು ಆರ್‌ಟಿಇ ಕಾರ್ಯಪಡೆ ಇದೆ. ಅದಕ್ಕೆ ವಿಶ್ವಸಂಸ್ಥೆಯ ಅಂಗವಾದ ಯೂನಿಸೆಫ್ ನಿಂದ ಬೆಂಬಲವಿದೆ. ಮಗುವಿನ ಶಿಕ್ಷಣದ ಹಕ್ಕನ್ನು ಕಾರ್ಯರೂಪಕ್ಕೆ ತರಲು ನಾಗಸಿಂಹ ಮತ್ತವರ ತಂಡದವರು ಹಗಲು ರಾತ್ರಿ ಕೆಲಸ ಮಾಡುತ್ತಿದ್ದಾರೆ.